# ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ

ಸಿ.ಸಿ. ನಂ.149/2022

ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1

| | | |
|---|---|---|
| **ಸಾಕ್ಷಿದಾರರ ಹೆಸರು** | : | ಚೈತ್ರಾ ಶೆಟ್ಟಿ |
| **ಗಂಡನ ಹೆಸರು** | : | ದೇವರಾಜ ಶೆಟ್ಟಿ |
| **ವಯಸ್ಸು** | : | 38 ವರ್ಷ |
| **ಉದ್ಯೋಗ** | : | ಮನೆಗೆಲಸ |
| **ವಾಸ** | : | ಮುಂಬೈ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 02-03-2023**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ,**

ದಿ.27-11-2019 ರಂದು ನಾನು ಮುಂಬೈಯಿಂದ ಉಡುಪಿಗೆ ರೈಲಿನಲ್ಲಿ ತಾಯಿ ಮನೆಗೆ ಬರುತ್ತಿದ್ದೆನು. ದಿ.28-11-2019 ರಂದು ನಾನು ಪ್ರಯಾಣಿಸುತ್ತಿದ್ದ ರೈಲು ಬೆಳಿಗ್ಗೆ 5.00 ಕ್ಕೆ ಮುರ್ಡೇಶ್ವರ ತಲುಪಿತ್ತು. ವಿ.ಸಿ. ಯಲ್ಲಿ ನೋಡುತ್ತಿರುವ ಆರೋಪಿ ಸದರಿ ರೈಲು ಸಾವಕಾಶವಾಗಿ ಚಲಾಯಿಸುವಾಗ ನಾನು ಪ್ರಯಾಣಿಸುತ್ತಿರುವ ರೈಲಿನ ಭೋಗಿಗೆ ಹತ್ತಿದ. ರೈಲು ಓಡಲು ಪ್ರಾರಂಭಿಸಿತ್ತು. ಅಷ್ಟರಲ್ಲಿ ನನ್ನ ಬಳಿ ಇದ್ದ ವ್ಯಾನಿಟಿ ಬ್ಯಾಗನ್ನು ಆರೋಪಿತನು ನನ್ನ ಬಳಿಯಿಂದ ಕಿತ್ತುಕೊಂಡು ಓಡಿಹೋಗಿ ರೈಲಿನಿಂದ ಹೊರಗೆ ಜಿಗಿದ. ನಾನು ಕೂಗಿಕೊಂಡಾಗ ಯಾರೋ ರೈಲಿನ ಚೈನನ್ನು ಎಳೆದರು. ಆಗ ರೈಲು ನಿಂತಿತ್ತು. ಪೊಲಿಸರು ನನ್ನ ಬಳಿ ಬಂದು ಆರೋಪಿತನ ವಿವರ ಕೇಳಿದಾಗ ನಾನು ಅವರಿಗೆ ಆರೋಪಿಯು ತೊಟ್ಟಿದ್ದ ಜೀನ್ಸ್ ಪ್ಯಾಂಟು, ಮುಖದ ಚಹರೆ ಹೇಳಿದೆನು. ರೈಲ್ವೆ ಟಿ.ಸಿ ಬಂದು ನನ್ನ ಬಳಿಯಿಂದ ವಿವರ ಪಡೆದರು. ನಂತರ ನಾನು ಉಡುಪಿಗೆ ಹೋದೆನು. ಅಲ್ಲಿಂದ ಬಂದು ಮುರ್ಡೇಶ್ವರ ಠಾಣೆಯಲ್ಲಿ ನಾನು ದೂರು ಸಲ್ಲಿಸಿದೆನು. ಕಳವಾದ ವ್ಯಾನಿಟಿ ಬ್ಯಾಗಿನಲ್ಲಿ ನನ್ನದು ನಾಲ್ಕು ಬಂಗಾರದ ಬಳೆಗಳು, ಒಂದು ಮಂಗಲಸೂತ್ರ, ಒಂದು ಉಂಗುರ, ಒಂದು ಚೈನು, ಒಂದು ಕಿವಿಯ ಓಲೆ ಸೆಟ್ಟು, ಮತ್ತು ಒಟ್ಟು ಮೂರು ಮೊಬೈಲುಗಳು ಮತ್ತು ರೂ.35,000/- ಹಣವಿತ್ತು. ಪಿರ್ಯಾದಿ ನೀಡಿದ ಸಂಜೆ ಪೋಲಿಸರು ನನ್ನನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿ ಪಂಚನಾಮೆ ಮಾಡಿರುತ್ತಾರೆ. ಆ ಸಮಯದಲ್ಲಿ ವಿ.ಸಿ.ಯಲ್ಲಿ ಕಾಣುತ್ತಿದ್ದ ಆರೋಪಿಯು ಇರುತ್ತಾನೆ.

ಪೋಲಿಸರು ಆರೋಪಿಗೆ ಮತ್ತು ನನಗೆ ಕಳ್ಳತನ ಯಾವಾಗ ಎಲ್ಲಿ ಕಳ್ಳತನವಾಯಿತು ಎಂಬ ವಿವರ ಕೇಳಿದರು. ಆಗ ನಾನು ಮತ್ತು ಆರೋಪಿತನು ವಿವರ ನೀಡಿರುತ್ತೇವೆ. ಮಾರನೇ ದಿನ ಪೋಲಿಸರು ಠಾಣೆಗೆ ನನ್ನನ್ನು ಕರೆಸಿದ್ದರು. ಆಗ ಆರೋಪಿಯ ಬ್ಯಾಗಿನಲ್ಲಿ ಬಂಗಾರ, ಹಣ ಮತ್ತು ಮೊಬೈಲುಗಳು ಇದ್ದವು. ಆರೋಪಿಯ ಬ್ಯಾಗಿನಲ್ಲಿದ್ದ ಬಂಗಾರದ ಒಡವೆ, ಹಣ ಮತ್ತು ಮೊಬೈಲನ್ನು ನಾನು ಗುರುತಿಸಿದೆನು. ಪೊಲಿಸರು ನನಗೆ ಸೇರಿದ ಬಂಗಾರ ಮತ್ತು ಮೊಬೈಲುಗಳನ್ನು ಹಿಂದಿರುಗಿಸಿರುತ್ತಾರೆ. ಆದರೆ ರೂ.35,000/- ಹಣ ನೀಡಿರುವುದಿಲ್ಲ. ಹಣ ಪೋಲಿಸರ ತಾಬಾದಲ್ಲಿ ಇರುತ್ತದೆ. ನಾನು ನೀಡಿದ ದೂರಿನ ಪ್ರತಿಯನ್ನು ನೋಡುತ್ತಿದ್ದು, ಅದನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ರೂ.34,200/- ಹಣವನ್ನು ಸಾಕ್ಷಿಗೆ ತೋರಿಸಲಾಯಿತು. ಅದನ್ನು ಸಾಕ್ಷಿ ಗುರುತಿಸಿರುತ್ತಾರೆ. ಅದನ್ನು ಎಂಒ-1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿ ಬಂಗಾರದ ಆಭರಣಗಳನ್ನು ಮತ್ತು ಮೊಬೈಲುಗಳನ್ನು ಮಧ್ಯಂತರ ಸ್ವಾಧೀನ ಪಡೆದುಕೊಂಡಿದ್ದು, ಅದನ್ನು ಈ ದಿನ ನ್ಯಾಯಾಲಯಕ್ಕೆ ಹಾಜರುಪಡಿಕಸಿರುವುದಿಲ್ಲ. ಆದ್ದರಿಂದ ಸಾಕ್ಷಿಗೆ ಸದರಿ ಬಂಗಾರದ ಆಭರಣಗಳನ್ನು ಮತ್ತು ಮೊಬೈಲನ್ನು ಮುಂದಿನ ಮುದ್ದತ್ತಿಗೆ ಹಾಜರುಪಡಿಸಲು ಆದೇಶ ನೀಡಿ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

Sd/-

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**